ಸವಣೂರು–ಶಿರವಾಡ ಹಾಗೂ ಸವಣೂರು ಹರವಿ ರಸ್ತೆಗಳನ್ನು ಲೋಕೋಪಯೋಗಿ ರಸ್ತೆಯಾಗಿ ಪರಿವರ್ತಿಸುವ ಬಗ್ಗೆ

೧೧೪೬. ಶ್ರೀ ಮಂಜುನಾಥ ಸಿ. ಕುನ್ನೂರ, (ಶಿಗ್ಗಾಂವ).—ಮಾನ್ಯ ಲೋಕೋಪಯೋಗಿ ಮಂತ್ರಿ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಸವಣೂರು ಶಿರವಾಡ, ಹಾಗೂ ಸವಣೂರು–ಹರವಿ ರಸ್ತೆಯನ್ನು ಲೋಕೋಪಯೋಗಿ ರಸ್ತೆಯನ್ನಾಗಿ ಪರಿವರ್ತಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ. ಹಾಗಿದ್ದಲ್ಲಿ ಈ ರಸ್ತೆಗಳನ್ನು ಜಿಲ್ಲಾ ಪರಿಷತ್ ನಿಂದ ಲೋಕೋಪಯೋಗಿ ಇಲಾಖೆಗೆ ವಹಿಸಲಾಗುವುದೇ—

ಆ) ಹಾಗಿದ್ದಲ್ಲಿ ಸದರಿ ರಸ್ತೆಗಳ ಕೆಲಸಗಳನ್ನು ಎಷ್ಟು ದಿವಸಗಳಲ್ಲಿ ಪ್ರಾರಂಭಿಸಲಾಗುವುದು ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಲೋಕೋಪಯೋಗಿ ಮಂತ್ರಿ ನೀರಾವರಿ ಮಂತ್ರಿಯವರು).—

ಅ) ೧) ಸವಣೂರು–ಶಿರವಾಡ ರಸ್ತೆಯನ್ನು ಮೇಲ್ದರ್ಜೆಗೆ ಏರಿಸಿ ಲೋಕೋಪಯೋಗಿ ಇಲಾಖೆಗೆ ತೆಗೆದುಕೊಳ್ಳಲು ಧಾರವಾಡ ಜಿಲ್ಲಾ ಪರಿಷತ್‌ನವರು ಸಹಮತಿ ಸೂಚಿಸಿದ್ದಾರೆ. ಪ್ರಸ್ತಾವನೆಯು ಸರ್ಕಾರಕ್ಕೆ ಬಂದಿದ್ದು ವಿಷಯವು ಪರಿಶೀಲನೆಯಲ್ಲಿದೆ.

೨) ಸವಣೂರು–ಹರವಿ ರಸ್ತೆಯನ್ನು ಮೇಲ್ದರ್ಜೆಗೆ ಏರಿಸುವುದಕ್ಕೆ ಜಿಲ್ಲಾ ಪರಿಷತ್ತಿನಿಂದ ಇನ್ನೂ ಸಹಮತಿ ಬಂದಿಲ್ಲ. ಸಹಮತಿ ಬಂದನಂತರ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಆ) ಮೇಲ್ಕಂಡ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಗೆ ತೆಗೆದುಕೊಂಡ ನಂತರ ಅಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗುವುದು.

ಶಿಗ್ಗಾಂವ ರಾಷ್ಟ್ರೀಯ ಹೆದ್ದಾರಿಯಲ್ಲಿ ಬಸ್ಸುಗಳ ನಿಲುಗಡೆ

೧೧೪೯. ಶ್ರೀ ಮಂಜುನಾಥ ಸಿ. ಕುನ್ನೂರು, (ಶಿಗ್ಗಾಂವ).—ಮಾನ್ಯ ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ರಾಜ್ಯ ಸಾರಿಗೆ ಬಸ್‌ಗಳು ರಾಷ್ಟ್ರೀಯ ಹೆದ್ದಾರಿ ಮೇಲಿಂದ ಹಾಯ್ದು ಹೋಗತಕ್ಕ ಬಸ್ಸುಗಳು ಶಿಗ್ಗಾಂವದಲ್ಲಿ ನಿಂತು ಚಲಿಸದೇ ಹೋಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಆ) ಹಾಗಿದ್ದಲ್ಲಿ ಇದರ ಬಗ್ಗೆ ಸರ್ಕಾರದವರು ಕೈಗೊಂಡ ಕಾರ್ಯಕ್ರಮಗಳೇನು ?

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ರಾಜ್ಯ ಸಚಿವರು).—

ಅ) ಎಲ್ಲಾ ಸಾಮಾನ್ಯ ಹಾಗೂ ಆಯ್ದ ಕೆಲವು ವೇಗದೂತ ಬಸ್ಸುಗಳಿಗೆ ಶಿಗ್ಗಾಂವ್‌ನಲ್ಲಿ ನಿಲುಗಡೆಯನ್ನು ಕಲ್ಪಿಸಲಾಗಿದೆ.

ಆ) ಈ ಈ ಕೆಳಕಂಡ ಪೆಚ್ಚುವರಿ ಬಸ್ಸಿಗೆ ನಿಲುಗಡೆಯನ್ನು ದಿನಾಂಕ ೭–೫–೯೦ ರಿಂದ ಕಲ್ಪಿಸಲಾಗಿದೆ. ಧಾರವಾಡ–ಬೆಂಗಳೂರು (ಸುಖಾಸೀನ)

ಹನಸೋಗೆ ಹತ್ತಿರ ಇರುವ ಹೊಳೆಗೆ ಸೇತುವೆ.

೧೩೦೨. ಶ್ರೀ ಕೆ. ಎಸ್. ಕಾಳಪುರಿಗೌಡ (ಪಿರಿಯಾಪಟ್ಟಣ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ;—

ಅ) ಕೆ. ಆರ್. ನಗರ ತಾಲ್ಲೂಕಿನ ಹನಸೋಗೆ ಗ್ರಾಮದ ಹತ್ತಿರವಿರುವ ಹೊಳೆಗೆ ಸೇತುವೆ ಕಟ್ಟಲು ಶಂಕುಸ್ಥಾಪನೆ ಹಾಕಿದ್ದು ಯಾವಾಗ ;

ಆ) ಈ ಸೇತುವೆಯ ನಿರ್ಮಾಣ ಈಗ ಯಾವ ಹಂತದಲ್ಲಿದೆ ? ಎಷ್ಟು ಹಣ ವೆಚ್ಚ ಮಾಡಲಾಗಿದೆ ;

ಇ) ಇದನ್ನು ಯಾವಾಗ ಪೂರ್ಣಗೊಳಿಸಲಾಗುವುದು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮಂತ್ರಿ ನೀರಾವರಿ ಮಂತ್ರಿಗಳು).—

ಅ) ದಿನಾಂಕ ೨೮–೯–೧೯೮೫ ರಲ್ಲಿ ಶಂಕುಸ್ಥಾಪನೆ ಮಾಡಲಾಯಿತು.

ಅ) ಈ ಕಾಮಗಾರಿಯು ಜಿಲ್ಲಾಪರಿಷತ್ ಸೇರಿದುದು ಎರಡು ಅಪರ್ಟ್‌ಮೆಂಟ್ ಹಾಗೂ ೬ ನಡುಕಂಬಗಳ ಪೈಕಿ ಒಂದು ನಡುಕಂಬವನ್ನು ಪೂರ್ಣಗೊಳಿಸಿದ್ದು, ಬಲಗಡೆ ಅಬಟ್‌ಮೆಂಟಿನ್ನು ನೆಲದ ಮಟ್ಟದವರೆಗೂ ತರಲಾಗಿದೆ. ಮೂರು ನಡುಕಂಬಗಳು ಹಾಗೂ ಅಪರ್ಟ್‌ಮೆಂಟಿನ ತಳಪಾಯದ ಕೆಲಸವನ್ನು ಕೈಗೆತ್ತಿಕೊಳ್ಳಲಾಗಿದೆ ಈವರೆವಿಗೆ ಸುಮಾರು ೯.೫೦ ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ.

ಇ) ಸದರಿ ಕಾಮಗಾರಿಯನ್ನು ಕೇಂದ್ರ ರಸ್ತೆ ನಿಧಿಯಿಂದ ಮುಂದುವರಿಸಲು ಉದ್ದೇಶಿಸಲಾಗಿದ್ದು ಇದನ್ನು ಜಿಲ್ಲಾಪರಿಷತ್ತಿನ ವ್ಯಾಪ್ತಿಯಿಂದ ಲೋಕೋಪಯೋಗಿ ಇಲಾಖೆಗೆ ಸೇರಿಸುವ ಪ್ರಸ್ತಾವನೆ ಇದೆ. ಬಾಕಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸುಮಾರು ಮೂರು ವರ್ಷಗಳು ಬೇಕಾಗುತ್ತದೆ.

1990ರ ಮೇ ವರೆಗೆ ಯಳಂದೂರು ತಾಲ್ಲೂಕಿಗೆ ಮಂಜೂರಾದ ರಸ್ತೆಗಳ ಮತ್ತು ಸೇತುವೆಗಳ ಕಾಮಗಾರಿ ಕೆಲಸಗಳು.

೧೦೩೭. ಶ್ರೀ ಎಂ. ಸಿದ್ದವಲಾದಯ್ಯ (ಕೊಳ್ಳೇಗಾಲ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ೧೯೮೭–೮೮ ರಿಂದ ೧೯೯೦ರ ಮೇ ವರೆಗೆ ಯಳಂದೂರು ತಾಲ್ಲೂಕಿಗೆ ಮಂಜೂರಾದ ರಸ್ತೆಗಳು ಮತ್ತು ಸೇತುವೆಗಳ ಕಾಮಗಾರಿ ಕೆಲಸಗಳ ಸಂಖ್ಯೆ ಎಷ್ಟು ಅವುಗಳ ಮೊಬಲಗು ಎಷ್ಟು;

ಆ) ಇವುಗಳಲ್ಲಿ ಪೂರ್ಣಗೊಂಡ ರಸ್ತೆಗಳು ಎಷ್ಟು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಜಿಲ್ಲಾ ಪರಿಷತ್ ಮತ್ತು ಲೋಕೋಪಯೋಗಿ ಇಲಾಖೆಗಳಿಂದ ೧೯೮೭–೮೮ನೇ ಸಾಲಿನಿಂದ ಮೇ ೯೦ರ ವರೆಗೆ ಮಂಜೂರಾಗಿರುವ ರಸ್ತೆ ಮತ್ತು ಸೇತುವೆ ಯೋಜನೆ ಮತ್ತು ಯೋಜನೇತರ ಕಾಮಗಾರಿಗಳ ಸಂಖ್ಯೆ ಮತ್ತು ಮೊಬಲಗನ್ನು ಕೆಳಗಿನಂತೆ ನೀಡಲಾಗಿದೆ.

೧೯೮೭–೮೮	೧೧೫ ಕೆಲಸಗಳು	ರೂ. ೨೮.೦೪ ಲಕ್ಷಗಳು
೧೯೮೮–೮೯	೧೫೯ ,,	ರೂ. ೧೯.೭೮ ,,
೧೯೮೯–೯೦	೧೨೨ ,,	ರೂ. ೨೨.೮೦ ,,
ಮೇ ೯೦ರ ವರೆಗೆ (೯೦—೯೧)	೧೪ ,,	ರೂ. ೩.೯೩ ,,
	೪೧೦ ಕೆಲಸಗಳು	ರೂ. ೭೪.೫೫ ಲಕ್ಷಗಳು

ಆ) ೧೯೮೭–೮೮ನೇ ಸಾಲಿನಿಂದ ಮೇ ೯೦ರವರೆಗೆ ಲೋಕೋಪಯೋಗಿ ಹಾಗೂ ಜಿಲ್ಲಾ ಪರಿಷತ್ ಇವುಗಳಿಂದ ಕೈಗೊಂಡು ಪೂರ್ಣಗೊಳಿಸಿರುವ ರಸ್ತೆ ಮತ್ತು ಸೇತುವೆ ಕಾಮಗಾರಿಗಳ ಸಂಖ್ಯೆಗಳು ಈ ಕೆಳಗಿನಂತೆ ನೀಡಲಾಗಿದೆ.

೧೯೮೭–೮೮	೧೧೧ ಕೆಲಸಗಳು
೧೯೮೮–೮೯	೧೫೮ ,,
೧೯೮೯–೯೦	೧೧೧ ,,
೧೯೯೦–೯೧	೫ ,,
(ಮೇ ೯೦ರವರೆಗೆ)	೩೮೫ ಕೆಲಸಗಳು